59B

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)ರವರ ಕಛೇರಿ
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ, ಬಾಣಾವರ

ಫೋನ್ : 08174 235695

ಕ್ರಮ ಸಂಖ್ಯೆ : ಸ.ಕಾ.ಇ./ವಸ್.ಎ/ಬಿ.ವಿ.ಆರ್/17-18/ — 361-67    ದಿನಾಂಕ: 26/05/17

ರವರಿಗೆ,
ಅಧೀಕ್ಷಕ ಇಂಜಿನಿಯರ್(ವಿ)
ವೃತ್ತ ಕಛೇರಿ, ಸಂತೇಪೇಟೆ
ಹಾಸನ.

## ವಿಷಯ : ಜನ ಸಂಪರ್ಕ ಸಭೆಯ ನಡಾವಳಿ

ಮುಖ್ಯಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನಾ ವಲಯ ಚಾವಿಸನಿನಿ ರವರ ಸುತ್ತೋಲೆ ಸಂಖ್ಯೆ ಸಂ.ಮುಇಂ(ವಿ)/ಅಇಂ/ಸ.ಇಂ(ತ)/ 2017-18 CYS-22 ದಿನಾಂಕ-28-4-2017 ರ ಅನುಸಾರ ದಿನಾಂಕ-24-05-17 ರಂದು ಬಾಣಾವರ ಉಪವಿಭಾಗ ವ್ಯಾಪ್ತಿಯ ಜನ ಸಂಪರ್ಕ ಸಭೆಯನ್ನು ನಡೆಸಲಾಯಿತು. ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಗ್ರಾಹಕರನ್ನು AEE ಮಂಜುನಾಥ ರವರು ಸ್ವಾಗತಿಸಿದ್ದರು ಈ ಸಭೆಗೆ ಸುಮಾರು 20-30 ಗ್ರಾಹಕರು ಹಾಜರಾಗಿದ್ದರು. ದಿನಾಂಕ 24-05-2017 ರಂದು KIADB ಹಾಸನ ಉಪವಿಭಾಗದಲ್ಲಿ ಮಾರಣಾಂತಿಕ ವಿದ್ಯುತ್ ಅಪಘಾತ ಸಂಭವಿಸಿದ್ದರಿಂದ ಮುಖ್ಯ ಇಂಜಿನಿಯರ್ ರವರು ಹಾಸನಕ್ಕೆ ಪರಿಶೀಲನೆಗೆ ಆಗಮಿಸಿದ ಕಾರಣದಿಂದ ಅಧೀಕ್ಷಕ ಇಂಜಿನಿಯರ್ ರವರು ಸಭೆಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಅವರ ಅನುಪಸ್ಥಿತಿಯಲ್ಲಿ ಅವರ ಅನುಮತಿ ಮೇರೆಗೆ ಪ್ರಭಾರಿ ಕಾರ್ಯನಿರ್ವಾಹಕ ಇಂಜಿನಿಯರ್ ಅರಸೀಕೆರೆ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ ಆ ಸಭೆಯ ನಡಾವಳಿಗಳನ್ನು ಈ ಕೆಳಕಂಡಂತೆ ದಾಖಲು ಮಾಡಲಾಗಿದೆ.

### ಸಭೆಗೆ ಹಾಜರಿದ್ದ ಸದಸ್ಯರು :

| | |
|---|---|
| ಶ್ರೀ ದೇವರಾಜು | :ಪ್ರಭಾರಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ವಿಭಾಗ ಕಛೇರಿ ಅರಸೀಕೆರೆ |
| ಶ್ರೀ ನಾಗರಾಜು ಎಂ.ಪಿ. | :ಲೆಕ್ಕಾಧಿಕಾರಿಯವರು ವಿಭಾಗ ಕಛೇರಿ ಅರಸೀಕೆರೆ |
| ಶ್ರೀ ಮಂಜುನಾಥ ಕೆ.ಬಿ | :ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಬಾಣಾವರ ಉಪ ವಿಭಾಗ |
| ಶ್ರೀ ಸದಾಶಿವಪ್ಪ | :ಲೆಕ್ಕಾಧಿಕಾರಿಯವರು (ಆಂಲೆ)ವಿಭಾಗ ಕಛೇರಿ ಅರಸೀಕೆರೆ |
| ಶ್ರೀ ದಿನೇಶ್ ಟಿ.ಎಚ್ | :ಸಹಾಯಕ ಇಂಜಿನಿಯರ್(ವಿ) ಬಾಣಾವರ.ಶಾಖೆ. |
| ಶ್ರೀ ದಯಾನಂದ ಎಸ್.ವಿ | :ಸಹಾಯಕ ಇಂಜಿನಿಯರ್(ವಿ) ಡಿ.ಎಂ.ಕೆ.ಶಾಖೆ. |
| ಶ್ರೀ ಪುಟ್ಟರಾಜು ಎ.ಡಿ | :ಶಾಖಾಧಿಕಾರಿ(ವಿ) ಜಾವಗಲ್ ಶಾಖೆ. |
| ಶ್ರೀ ಬಿಳಿಯಪ್ಪ ಕೆ | :ಶಾಖಾಧಿಕಾರಿ(ವಿ) ಕಣಕಟ್ಟೆ ಶಾಖೆ. |

### ನಡಾವಳಿಗಳು :

(1) ಬೈರಗೊಂಡನಹಳ್ಳಿ ಶಾಲೆಯ ಮುಂಭಾಗದಲ್ಲಿ ವಿದ್ಯುತ್ ಮಾರ್ಗಕ್ಕೆ ಮರದ ಕೊಂಬೆಯೊಂದು ಸ್ಪರ್ಶವಾಗುತ್ತಿರುವ ಬಗ್ಗೆ ರಾಜಪ್ಪ ಎಂಬ ಗ್ರಾಹಕರು ಮಾಹಿತಿ ನೀಡಿರುತ್ತಾರೆ.

(2) ಆರ್ ಆರ್ ಸಂಖ್ಯೆ BP-19553 ವಿದ್ಯುತ್ ಸ್ಥಾವರವನ್ನು ಶಾಶ್ವತ ನಿಲುಗಡೆ ಮಾಡುವಂತೆ ಕೋರಿ ಬಿ.ಕೆ ರಂಗಸ್ವಾಮಿ ಎಂಬ ಗ್ರಾಹಕರು ಅರ್ಜಿ ನೀಡಿರುತ್ತಾರೆ.

(3) ಅಕ್ರಮ ಸಕ್ರಮ ಯೋಜನೆಯಲ್ಲಿ ಮಾರ್ಚ್-2015 ರಲ್ಲಿ ಹಣ ಸಂದಾಯ ಮಾಡಿರುವ ಶ್ರೀ ರಂಗಯ್ಯನವರು ಮೂಲಭೂತ ಸೌಕರ್ಯ ಒದಗಿಸುವಂತೆ, ಕೋರಿ ಮನವಿ ಪತ್ರ ಸಲ್ಲಿಸಿದ್ದಾರೆ.

(4) ಎಂ ವಿ ಹಟ್ಟಿ, ಯಾದಾಪುರ ಹಟ್ಟಿ ಇನ್ನಿತರ ಗ್ರಾಮಗಳಲ್ಲಿರುವ SHORT POLE ಗಳನ್ನು ಬದಲಾಯಿಸುವಂತೆ. ಡಿ ಎಮ್ ಕುರ್ಕೆ ಶಾಖೆಯ ಸಲಹಾ ಸಮಿತಿ ಸದಸ್ಯರಾದ ಶ್ರೀ ರಮೇಶ್ ರವರು ಮನವಿ ಮಾಡಿದರು

ಸಭೆಗೆ ಹಾಜರಾಗಿದ್ದ ಎಲ್ಲಾ ಸಲಹಾ ಸಮಿತಿ ಸದಸ್ಯರಿಗೆ ಮತ್ತು ಗ್ರಾಹಕರಿಗೆ ವಂದನೆಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

25/5/17

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್. ಉಪವಿಭಾಗ ಬಾಣಾವರ

ಪ್ರತಿಗಳು:
1. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್. ವಿಭಾಗ ಕಛೇರಿ ಸೆಸ್ಕ್. ಅರಸೀಕೆರೆ ರವರ ಮಾಹಿತಿಗಾಗಿ
2. ಲೆಕ್ಕಾಧಿಕಾರಿ ಕಾ. ಪಾ ವಿಭಾಗ ಅರಸೀಕೆರೆ ರವರ ಮಾಹಿತಿಗಾಗಿ.
3. ಲೆಕ್ಕಾಧಿಕಾರಿ(ಆಂ.ಪ)ಕಾ & ಪಾ ವಿಭಾಗ ಅರಸೀಕೆರೆ ರವರ ಮಾಹಿತಿಗಾಗಿ.
4. ಎಲ್ಲಾ ಶಾಖಾಧಿಕಾರಿಗಳ ಮಾಹಿತಿಗಾಗಿ.